**ಕರ್ನಾಟಕ ಸರ್ಕಾರ**
**(ತಾಂತ್ರಿಕ ಶಿಕ್ಷಣ ಇಲಾಖೆ)**

ಸಂಖ್ಯೆ:ಟಿಟಿಇ 04 ಇಎಪಿ 2019

ಕಾರ್ಯದರ್ಶಿಯವರ ಕಛೇರಿ,
ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ,
ಅರಮನೆ ರಸ್ತೆ, ಬೆಂಗಳೂರು-01,
ದಿನಾಂಕ:27/12/2019.

**ಅಧಿಸೂಚನೆ**

ವಿಷಯ: ಸಿಐಪಿಇಟಿ, (Central Institute of Plastic Engineering & Technology – CIPET)ಮೈಸೂರು ಸಂಸ್ಥೆಯು ನಡೆಸುವ 3 ವರ್ಷಗಳ ಡಿಪ್ಲೊಮಾ ಇನ್ ಪ್ಲಾಸ್ಟಿಕ್ ಟೆಕ್ನಾಲಜಿ ಮತ್ತು ಪ್ಲಾಸ್ಟಿಕ್ ಮೋಲ್ಡ್ ಟೆಕ್ನಾಲಜಿ ಕೋರ್ಸುಗಳಲ್ಲಿ ವ್ಯಾಸಂಗ ಮಾಡಿರುವ ಹಾಗೂ ಮಾಡುತ್ತಿರುವ ಅಭ್ಯರ್ಥಿಗಳು ಕೆಲವೊಂದು ಬ್ರಿಡ್ಜ್ ವಿಷಯಗಳನ್ನಾಗಿ ಮಾರ್ಚ್/ಏಪ್ರಿಲ್ 2020 ರ ಸೆಮಿಸ್ಟರ್ ಪರೀಕ್ಷೆಗೆ ಹೆಸರು ನೋಂದಾಯಿಸುವ ಕುರಿತು.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ:ಇಡಿ:20:ಟಿಇಸಿ:2015, ದಿ:07/04/2016.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರಿ ಆದೇಶ ಸಂಖ್ಯೆ:ಇಡಿ:20:ಟಿಇಸಿ:2015, ದಿ:07/04/2016 ರಲ್ಲಿ ಮೈಸೂರಿನ ಸಿಐಪಿಇಟಿ - (CIPET) ಸಂಸ್ಥೆಯು ನಡೆಸುವ 3 ವರ್ಷಗಳ ಡಿಪ್ಲೊಮಾ ಇನ್ ಪ್ಲಾಸ್ಟಿಕ್ ಟೆಕ್ನಾಲಜಿ ಮತ್ತು ಪ್ಲಾಸ್ಟಿಕ್ ಮೋಲ್ಡ್ ಟೆಕ್ನಾಲಜಿ ಕೋರ್ಸಿನ ವಿದ್ಯಾರ್ಥಿಗಳು 3, 4, 5 ಮತ್ತು 6ನೇ ಸೆಮಿಸ್ಟರ್‌ಗಳಲ್ಲಿ ಈ ಕೆಳಕಂಡ ವಿಷಯಗಳನ್ನು/ಪಠ್ಯಕ್ರಮಗಳನ್ನು ಬಾಹ್ಯ ವಿಷಯಗಳನ್ನಾಗಿ ಅಭ್ಯಾಸ ಮಾಡಿ ತೇರ್ಗಡೆ ಹೊಂದಿದಲ್ಲಿ, ಕರ್ನಾಟಕ ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿಯು ನಡೆಸುವ ಡಿಪ್ಲೊಮಾ ಇನ್ ಪಾಲಿಮರ್ ಟೆಕ್ನಾಲಜಿ ಕೋರ್ಸಿಗೆ ತತ್ಸಮಾನವಾಗಿ ಪರಿಗಣಿಸಲು ಮತ್ತು ಲ್ಯಾಟರಲ್ ಎಂಟ್ರಿ ಮೂಲಕ ಬಿ.ಇ. ವ್ಯಾಸಂಗ ಮುಂದುವರಿಸಲು ಅನುಮತಿ ನೀಡಿ ಆದೇಶಿಸಿದೆ.

ಪ್ರಯುಕ್ತ ಸಿಐಪಿಇಟಿ ನಲ್ಲಿ ಹಾಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಹಾಗೂ ಈಗಾಗಲೇ ವ್ಯಾಸಂಗವನ್ನು ಪೂರ್ಣಗೊಳಿಸಿರುವ ವಿದ್ಯಾರ್ಥಿಗಳು ತಾಂತ್ರಿಕ ಪರೀಕ್ಷಾ ಮಂಡಳಿ ನಡೆಸುವ ಡಿಪ್ಲೊಮಾ ಇನ್ ಪಾಲಿಮರ್ ಟೆಕ್ನಾಲಜಿ ಕೋರ್ಸಿಗೆ ತತ್ಸಮಾನತೆ ಪಡೆಯಲು, ಈ ಕೆಳಕಂಡಂತೆ ಬ್ರಿಡ್ಜ್ ಕೋರ್ಸುಗಳನ್ನು ಅಭ್ಯಸಿಸಿ ತೇರ್ಗಡೆ ಹೊಂದಬೇಕಾಗಿರುತ್ತದೆ.

| ಸೆಮಿಸ್ಟರ್ | ಕೋರ್ಸು ವಿಷಯಗಳ ವಿವರ | ವಿಷಯ/ಪ್ರಶ್ನೆ ಪತ್ರಿಕೆ ಕೋಡ್ |
|---|---|---|
| III | 1.Physical Chemistry<br>2.Elements of Chemical Engineering | 9SCH31<br>9P032 |
| IV | 1.Organic Chemistry<br>2.Compounding Technology<br>3.Rubber Material Technology | 9CH41<br>9P042<br>9P044 |
| V | 1.Rubber Processing Technology<br>2.Engineering Chemistry | 9P052<br>9P053 |
| VI | 1.Polymer Products and Manufacturing<br>2.Polymer Blends and Composites<br>3.Instrumentation and process Control | 9P061<br>9P062<br>9P064 |

eap sv

ಈ ಮೇಲ್ಕಂಡ ಬ್ರಿಡ್ಜ್ ಕೋರ್ಸುಗಳನ್ನು ಸಿಐಪಿಇಟಿ ನಲ್ಲಿ **"ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು"** ಮೂರನೆ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುವಾಗ ಮೂರನೇ ಸೆಮಿಸ್ಟರ್‌ನ ಬ್ರಿಡ್ಜ್ ವಿಷಯಗಳನ್ನು, ನಾಲ್ಕನೇ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳು ನಾಲ್ಕನೇ ಸೆಮಿಸ್ಟರ್‌ನ ಬ್ರಿಡ್ಜ್ ವಿಷಯಗಳನ್ನು, ಐದನೇ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳು ಐದನೇ ಸೆಮಿಸ್ಟರ್‌ನ ಬ್ರಿಡ್ಜ್ ವಿಷಯಗಳನ್ನು ಮತ್ತು ಆರನೇ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುವಾಗ ಆರನೇ ಸೆಮಿಸ್ಟರ್ ಬ್ರಿಡ್ಜ್ ವಿಷಯಗಳ ಪರೀಕ್ಷೆ ತೆಗೆದುಕೊಳ್ಳಬೇಕಾಗುತ್ತದೆ.

ಒಂದು ವೇಳೆ ನಾಲ್ಕನೇ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುವ ಸಿಐಪಿಇಟಿ ವಿದ್ಯಾರ್ಥಿಗಳು ಮೂರನೇ ಸೆಮಿಸ್ಟರ್‌ನ ಬ್ರಿಡ್ಜ್ ವಿಷಯಗಳ ಪರೀಕ್ಷೆ ತೆಗೆದುಕೊಳ್ಳದಿದ್ದರೆ ಮೂರು ಮತ್ತು ನಾಲ್ಕನೇ ಸೆಮಿಸ್ಟರ್ ಬ್ರಿಡ್ಜ್ ವಿಷಯಗಳ ಪರೀಕ್ಷೆ ಒಟ್ಟಿಗೆ ತೆಗೆದುಕೊಳ್ಳಬೇಕಾಗುತ್ತದೆ. ಐದನೇ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳು ಮೂರು ಮತ್ತು ನಾಲ್ಕನೆ ಸೆಮಿಸ್ಟರ್‌ನ ಬ್ರಿಡ್ಜ್ ವಿಷಯಗಳಿಗೆ ಪರೀಕ್ಷೆ ತೆಗೆದುಕೊಳ್ಳದೆ ಇದ್ದಲ್ಲಿ ಮೂರನೇ, ನಾಲ್ಕನೇ ಮತ್ತು ಐದನೇ ಸೆಮಿಸ್ಟರ್‌ನ ಬ್ರಿಡ್ಜ್ ವಿಷಯಗಳ ಪರೀಕ್ಷೆ ಒಟ್ಟಿಗೆ ತೆಗೆದುಕೊಳ್ಳಬೇಕಾಗುತ್ತದೆ. ಆರನೇ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳು ಮೂರು, ನಾಲ್ಕು ಹಾಗೂ ಐದನೇ ಸೆಮಿಸ್ಟರ್‌ನ ಬ್ರಿಡ್ಜ್ ವಿಷಯಗಳ ಪರೀಕ್ಷೆ ತೆಗೆದುಕೊಳ್ಳದಿರುವ ವಿದ್ಯಾರ್ಥಿಗಳು ಮೂರನೇ, ನಾಲ್ಕನೇ, ಐದನೇ ಮತ್ತು ಆರನೇ ಸೆಮಿಸ್ಟರ್‌ನ ಬ್ರಿಡ್ಜ್ ವಿಷಯಗಳ ಪರೀಕ್ಷೆ ಒಟ್ಟಿಗೆ ತೆಗೆದುಕೊಳ್ಳಬೇಕಾಗುತ್ತದೆ.

ಈಗಾಗಲೇ ಸಿಐಪಿಇಟಿ ಯಿಂದ ಡಿಪ್ಲೊಮಾ **"ಪೂರ್ಣ ವ್ಯಾಸಂಗ ಮಾಡಿರುವ ವಿದ್ಯಾರ್ಥಿಗಳು"** ಮೂರನೇ, ನಾಲ್ಕನೇ, ಐದನೇ ಮತ್ತು ಆರನೇ ಸೆಮಿಸ್ಟರ್‌ನ ಬ್ರಿಡ್ಜ್ ವಿಷಯಗಳ ಪರೀಕ್ಷೆಯನ್ನು ಒಟ್ಟಿಗೆ ತೆಗೆದುಕೊಳ್ಳ ಬಹುದಾಗಿದೆ.

ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಈ ಬ್ರಿಡ್ಜ್ ಕೋರ್ಸಿನ ಪಠ್ಯ ವಿಷಯಗಳು ಸಿಐಪಿಇಟಿ(CIPET) ಕೋರ್ಸಿನ Carry over ಗೆ ಸಂಬಂಧಿಸುವುದಿಲ್ಲ.

ಈ ಬ್ರಿಡ್ಜ್ ವಿಷಯಗಳನ್ನು ಸಿಐಪಿಇಟಿ(CIPET) ವಿದ್ಯಾರ್ಥಿಗಳಿಗೆ **"ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್, ಮೈಸೂರು"** ಈ ಸಂಸ್ಥೆಯಲ್ಲಿ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಸಿಐಪಿಇಟಿ ವಿದ್ಯಾ ಸಂಸ್ಥೆಯ ವಿದ್ಯಾರ್ಥಿಗಳು/ಅಭ್ಯರ್ಥಿಗಳು www.dte.kar.nic.in ವೆಬ್‌ಸೈಟ್‌ನಲ್ಲಿ ಪರೀಕ್ಷಾ ಅರ್ಜಿಯನ್ನು ಡೌನ್‌ಲೋಡ್ ಮಾಡಿ ಭರ್ತಿ ಮಾಡಿದ ಅರ್ಜಿಯನ್ನು ಸಿಐಪಿಇಟಿ ಸಂಸ್ಥೆಯ ಪ್ರಾಚಾರ್ಯರ ಮುಖಾಂತರ ಪರೀಕ್ಷಾ ಅರ್ಜಿಗಳನ್ನು ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ.

ಸಿಐಪಿಇಟಿ ಸಂಸ್ಥೆಯ ಪ್ರಾಚಾರ್ಯರು ವಿದ್ಯಾರ್ಥಿಗಳ ಪಟ್ಟಿ ಸಿದ್ಧಪಡಿಸಿ, ತಮ್ಮ ಶಿಫಾರಸ್ಸಿನೊಂದಿಗೆ ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್, ಮೈಸೂರು ಇವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಲು ಈ ಮೂಲಕ ಸೂಚಿಸಲಾಗಿದೆ.

**ಪರೀಕ್ಷಾ ಶುಲ್ಕ ಪಾವತಿಸುವ ವಿವರ:-**

**ದಂಡ ರಹಿತ**

ಎ) ದಿನಾಂಕ:31/12/2019 ರಿಂದ 31/01/2020 ರವರೆಗೆ (ಎರಡೂ ದಿನಗಳು ಸೇರಿಸಿ)

**ದಂಡ ಸಹಿತ:**

ಬಿ) ಮೊದಲನೇ ಹಂತ ದಿನಾಂಕ:01/02/2020 ರಿಂದ 08/02/2020 ರವರೆಗೆ (ಎರಡೂ ದಿನಗಳು ಸೇರಿ) ರೂ.50-0 ದಂಡ ಶುಲ್ಕದೊಡನೆ ಪ್ರತಿ ಸೆಮಿಸ್ಟರ್‌ಗೆ.

ಸಿ) ಎರಡನೇ ಹಂತ ದಿನಾಂಕ:10/02/2020 ರಿಂದ 17/02/2020 ರವರೆಗೆ (ಎರಡೂ ದಿನಗಳು ಸೇರಿ) ರೂ.100-00 ದಂಡ ಶುಲ್ಕದೊಂದಿಗೆ ಪ್ರತಿ ಸೆಮಿಸ್ಟರ್‌ಗೆ.

ಡಿ) ಮೂರನೇ ಹಂತ ದಿನಾಂಕ:18/02/2020 ರಿಂದ 24/02/2020 ರವರೆಗೆ (ಎರಡೂ ದಿನಗಳು ಸೇರಿ) ರೂ.200-00 ದಂಡ ಶುಲ್ಕದೊಂದಿಗೆ ಪ್ರತಿ ಸೆಮಿಸ್ಟರ್‌ಗೆ.

eap sv

ಇ) ನಾಲ್ಕನೇ ಹಂತ ದಿನಾಂಕ:25/02/2020 ರಿಂದ 02/03/2020 ರವರೆಗೆ (ಎರಡೂ ದಿನಗಳು ಸೇರಿ) ರೂ.400-00 ದಂಡ ಶುಲ್ಕದೊಂದಿಗೆ ಪ್ರತಿ ಸೆಮಿಸ್ಟರ್‌ಗೆ

ದಿನಾಂಕ:03/03/2020 ರಿಂದ ಪರೀಕ್ಷೆ ಪ್ರಾರಂಭವಾಗುವ 15 ದಿನಗಳ ಮೊದಲು ರೂ.2000-00 ದಂಡ ಶುಲ್ಕದೊಡನೆ ಪ್ರತಿ ಸೆಮಿಸ್ಟರ್‌ಗೆ.

ಪ್ರತಿ ಸೆಮಿಸ್ಟರ್‌ಗೆ ಎರಡು ವಿಷಯಗಳವರೆಗೆ ರೂ.200-00 ಪರೀಕ್ಷಾ ಶುಲ್ಕ ಮತ್ತು ಅಂಕಪಟ್ಟಿ ಶುಲ್ಕ ರೂ.50-00 ಗಳನ್ನು ಎರಡಕ್ಕಿಂತ ಮೇಲ್ಪಟ್ಟು ವಿಷಯಗಳಿಗೆ ರೂ.300-00 ಪರೀಕ್ಷಾ ಶುಲ್ಕ ಮತ್ತು ಅಂಕಪಟ್ಟಿ ಶುಲ್ಕ ರೂ.50-00 ಗಳನ್ನು ಪರೀಕ್ಷೆ ತೆಗೆದುಕೊಳ್ಳಲು ಖಜಾನೆ-2 ಮುಖಾಂತರ ಸರ್ಕಾರಿ ಖಜಾನೆಗೆ 0202-02-101-0-01 ಲೆಕ್ಕ ಶೀರ್ಷಿಕೆಗೆ ಪಾವತಿಸುವುದು ಕಡ್ಡಾಯವಾಗಿರುತ್ತದೆ.

ಈ ವಿಷಯ ಕುರಿತು ಹೆಚ್ಚಿನ ವಿವರಗಳಿಗೆ ಪ್ರಿನ್ಸಿಪಾಲರು, ಸಿಐಪಿಇಟಿ(CIPET) , ಮೈಸೂರು ಈ ವಿದ್ಯಾಸಂಸ್ಥೆಯಲ್ಲಿ ವಿಚಾರಿಸಲು ವಿದ್ಯಾರ್ಥಿಗಳಿಗೆ ಸೂಚಿಸಲಾಗಿದೆ.

ಉ. ಕಾರ್ಯದರ್ಶಿ
27/12/19

ಇವರಿಗೆ,

ಪ್ರಿನ್ಸಿಪಾಲರು,

ಸಿಐಪಿಇಟಿ, ಮೈಸೂರು – ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ. ಈ ವಿಷಯಕ್ಕೆ ಹೆಚ್ಚಿನ ಪ್ರಚಾರ ನೀಡುವಂತೆ ಕ್ರಮ ಜರುಗಿಸುವುದು.

ಪ್ರತಿ:

1) ಪ್ರಿನ್ಸಿಪಾಲರು, ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್, ಮೈಸೂರು.- ಸೂಕ್ತ ಕ್ರಮಕ್ಕಾಗಿ.
2) ಉಪ ನಿರ್ದೇಶಕರು(ಪರೀಕ್ಷೆ)
3) ಸಹಾಯಕ ನಿರ್ದೇಶಕರು (ಪರೀಕ್ಷೆ)
4) ಎಲ್ಲಾ ತಾಂತ್ರಿಕ ಸಹಾಯಕರು (ಪರೀಕ್ಷೆ)
5) ಅಧೀಕ್ಷಕರು (ಪರೀಕ್ಷಾ ವಿಭಾಗ 1 ಮತ್ತು 2)
6) ಇಸಿಎಸ್ ವಿಭಾಗ (1 ರಿಂದ 3)
7) ಆರ್.ಡಿ.ಎಂ. (1 ರಿಂದ 15)
8) ಸಾರ್ವಜನಿಕ ಸಂಪರ್ಕಾಧಿಕಾರಿ.
9) ಇ-ಗವರ್ನೆನ್ಸ್ ವಿಭಾಗಕ್ಕೆ (ವೆಬ್‌ಸೈಟ್‌ನಲ್ಲಿ ಪ್ರಕಟಿಸಲು)
10) ಕಛೇರಿ ಪ್ರತಿ.

eap sv